**ವಿದ್ಯುಚ್ಛಕ್ತಿ ಲೋಕಪಾಲರು**

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇವರ ಮುಂದೆ.**

**ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು.**

**ಪ್ರಕರಣ ಸಂಖ್ಯೆ:ಒಎಂಬಿ/ಎಂ/ಜಿ–301/2018**
**ದಿನಾಂಕ:30–01–2019**

**ಮೇಲ್ಮನವಿದಾರ,**

ವಿ.ಅಬ್ದುಲ್ ರಹಿಮಾನ್
ಬಿನ್, ದಿವಂಗತ ಅಬ್ದುಲ್ ಖಾದರ್
ತಲಪಾಡಿ ಮನೆ, ಜೋಡುಮಾರ್ಗ ಗ್ರಾಮ,
ಬಂಟ್ವಾಳ ತಾಲ್ಲೂಕು,
ಮಂಗಳೂರು–574 004.

**ಪ್ರತಿವಾದಿಗಳು:**

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
   ಕಾರ್ಯ ಮತ್ತು ಪಾಲನಾ ಉಪವಿಭಾಗ–1,
   ಮ.ವಿ.ಸ.ಕಂ., ಬಂಟ್ವಾಳ.
2. ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
   ಕಾರ್ಪೋರೇಟ್ ಕಛೇರಿ, ಮೆಸ್ಕಾಂ ಭವನ,
   ಕಾವೂರು ಕ್ರಾಸ್ ರೋಡ್,
   ಬಿಜೈ, ಮಂಗಳೂರು–574 004.
3. ಅಧ್ಯಕ್ಷರು, ಸಿಜಿಆರ್ಎಫ್, ದಕ್ಷಿಣ ಕನ್ನಡ ಜಿಲ್ಲೆ,
   ಅಧೀಕ್ಷಕ ಅಭಿಯಂತರರು (ವಿ)ಕಛೇರಿ,
   ನಿರ್ವಹಣೆ ಮತ್ತು ಪಾಲನೆ ವೃತ್ತ, ಮೆಸ್ಕಾಂ,
   ಅಂಚೆ ಪೆಟ್ಟಿಗೆ ಸಂಖ್ಯೆ:240.
   ಅತ್ತಾವರ, ಮಂಗಳೂರು ವಲಯ.

ಪ್ರಸ್ತುತ ಪ್ರಕರಣದಲ್ಲಿ ಮೇಲ್ಮನವಿದಾರರಾದ ಶ್ರೀ ವಿ.ಅಬ್ದುಲ್ ರಹಿಮಾನ್ ಇವರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಸಿಜಿಆರ್ಎಫ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಇವರ ದೂರು ಸಂಖ್ಯೆ: CGRF/DK/B-1/DK-1 ಪ್ರಕರಣದಲ್ಲಿ ದಿನಾಂಕ:25–09–2018 ರಂದು ಮಾಡಿರುವ ಆದೇಶವನ್ನು ಪ್ರಶ್ನಿಸಿ ಈ ಪ್ರಾಧಿಕಾರದ ಮುಂದೆ ದಿನಾಂಕ:19–11–2018 ರಂದು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:22–11–2018 ರಂದು ಮೇಲ್ಮನವಿದಾರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಮೆಸ್ಕಾಂ, ಬಂಟ್ವಾಳ, ಪ್ರತಿವಾದಿ–1 ಇವರಿಗೆ ನೋಟೀಸ್ ನೀಡಿ KERC (CGRF & Ombudsman) Regulations 2004, ರ Regulation 20 (1) ರ ಪ್ರಕಾರ ಉಭಯ ಪಕ್ಷದವರು ಸಂಧಾನದ ಮೂಲಕ ರಾಜಿ ಮಾಡಿಕೊಳ್ಳಲು ಇರುವ ಅವಕಾಶ, ಹಾಗೂ ಅದರ ಪ್ರಯೋಜನ ಪಡೆಯಲು ತಿಳಿಸುತ್ತಾ, ದಿನಾಂಕ:10–12–2018 ರಂದು ಬೆಳಿಗ್ಗೆ 11.30 ಘಂಟೆಗೆ ವಿದ್ಯುಚ್ಛಕ್ತಿ ಲೋಕಪಾಲರ ಕಛೇರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಯಿತು.

ದಿನಾಂಕ:10–12–2018, 19–12–2018, ಹಾಗೂ 11–01–2019 ರಂದು ಪ್ರಕರಣದ ಕುರಿತು ವಿಚಾರಣೆ ನಡೆಸಲಾಯಿತು. ಮೇಲ್ಮನವಿ ಕುರಿತು ಪ್ರತಿವಾದಿ–1 ಇವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಗೆ ಮೇಲ್ಮನವಿದಾರರು ಸಹ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**ಪ್ರಕರಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ.**

ಮೇಲ್ಮನವಿದಾರರು ಮೇಲ್ಮನವಿ ದೂರಿನಲ್ಲಿ ಮೆಸ್ಕಾಂ ನಿಯಮಿತಕ್ಕೆ ಸೇರಿದ ವಿದ್ಯುತ್ ಸ್ಥಾವರ ಸಂಖ್ಯೆ: BMP 63, LT-5 ಸಂಪರ್ಕವನ್ನು ಪಡೆದುಕೊಂಡಿದ್ದು, ದಿನಾಂಕ:23–01–2018 ರಂದು ಪ್ರತಿವಾದಿ–1 ಮೇಲ್ಮನವಿದಾರರಿಗೆ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್‌ನಲ್ಲಿ ಎಲ್‌ಟಿ ರೇಟಿಂಗ್ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು

ಮೇಲ್ಮನವಿದಾರರಿಗೆ ಸಂಬಂಧಿಸಿದ ವಿದ್ಯುತ್ ಸ್ಥಾವರವನ್ನು ತಪಾಸಣೆ ನಡೆಸಿದಾಗ ದೋಷ ಕಂಡು ಹಿಡಿದಿರುವುದಾಗಿ ಮತ್ತು ವಿದ್ಯುತ್ ಸ್ಥಾವರದಲ್ಲಿ ದೋಷವು 2013 ರಿಂದಲೇ ಕಂಡು ಬರುತ್ತದೆ ಎಂದು ಹೇಳಿರುತ್ತಾರೆ. ದಿನಾಂಕ:01–10–2013 ರಿಂದ ಜನವರಿ 2018 ರವರೆಗಿನ 5 ವರ್ಷದ ಅವಧಿಗೆ ತಪ್ಪಾದ ಮಾಪನವನ್ನು ಮಾಡಲಾಗಿದೆ ಎಂದು ಪರಿಷ್ಕೃತ ಬಿಲ್ಲನ್ನು ನೀಡಿರುತ್ತಾರೆ. ಮೇಲ್ಮನವಿದಾರರು ತಮ್ಮ ಮೇಲ್ಮನವಿಯಲ್ಲಿ ಪ್ರತಿವರ್ಷವು ಮೇಲ್ಮನವಿದಾರರಿಗೆ ಸಂಬಂಧಿಸಿದ ವಿದ್ಯುತ್ ಸ್ಥಾವರವನ್ನು ಪ್ರತಿವಾದಿಗಳು ಸರಿಯಾಗಿರುವುದನ್ನು ದೃಢಪಡಿಸಿದ್ದು, ಮೇಲ್ಮನವಿದಾರರಿಗೆ ಇಲ್ಲಿಯವರೆಗೆ ಯಾವುದೇ ಬಿಲ್ಲು ಪಾವತಿ ಬಾಕಿ ಇಟ್ಟಿರುವ ಬಗ್ಗೆ ಸೂಚನಾ ಪತ್ರವನ್ನು ನೀಡಿರುವುದಿಲ್ಲ. ಪ್ರತಿವಾದಿಗಳ ಪತ್ರದಂತೆ ಜನವರಿ 2018 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿದ್ಯುತ್ ಸ್ಥಾವರವನ್ನು ತಪಾಸಣೆ ನಡೆಸಿದ್ದಾರೆಂದು ಹೇಳಿಕೊಂಡು 5 ಕಾನ್ಸ್ಟಂಟ್ (Constant) ಹೆಚ್ಚುವರಿ ಬಿಲ್ಲನ್ನು ಈಗ ಕೇಳಲು ಬರುವುದಿಲ್ಲ. 2013ರ ಲಾಗಾಯ್ತು ಇಲ್ಲಿಯವರೆಗೂ ಮೇಲ್ಮನವಿದಾರರಿಗೆ ಸಂಬಂಧಿಸಿದ ವಿದ್ಯುತ್ ಸ್ಥಾವರವು ಸರಿಯಿಲ್ಲವೆಂದು ಯಾವತ್ತು ಸೂಚನಾ ಪತ್ರವನ್ನು ಕೂಡ ನೀಡಿರುವುದಿಲ್ಲ. ಆದ್ದರಿಂದ ಪ್ರತಿವಾದಿ–1 ಕೇಳಿರುವಂತೆ ಹೆಚ್ಚುವರಿಯಾಗಿ ವಿಧಿಸಲಾದ ಬಿಲ್ಲು ರೂ.67,996/– ಪಾವತಿಸಲು ಮೇಲ್ಮನವಿದಾರರು ಬಾಧ್ಯಸ್ಥರಲ್ಲ. ಪ್ರತಿವಾದಿ–1 ದಿನಾಂಕ:18–06–2018 ರಂದು ಪ್ರಶ್ನಿತ ಮೊಬಲಗನ್ನು ಪಾವತಿಸುವಂತೆ ಆದೇಶಿಸಿರುತ್ತಾರೆ ಎಂದು ತಿಳಿಸಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ದಕ್ಷಿಣ ಕನ್ನಡ ಜಿಲ್ಲೆ, ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ (ಸಿಜಿಆರ್ಎಫ್) ಮುಂದೆ ದೂರನ್ನು ಸಲ್ಲಿಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ, ಸಿಜಿಆರ್ಎಫ್, ಇವರು ದಿನಾಂಕ:25–09–2018 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕಾರ್ಯ & ಪಾಲನಾ ಉಪವಿಭಾಗ–1, ಬಂಟ್ವಾಳ ರವರು ದೂರುದಾರರಿಗೆ ರೂ.67,996/–ಗಳ ಪೂರಕ ಬಿಲ್ಲು ಮೊತ್ತವನ್ನು ಪಾವತಿಸಲು ನೀಡಿರುವ ಆದೇಶವು ಸಮಂಜಸವೆಂದು ಅಭಿಪ್ರಾಯಪಟ್ಟು, ದೂರುದಾರರ ದೂರನ್ನು ವಜಾಗೊಳಿಸಿರುತ್ತಾರೆ. ದೂರುದಾರರು ಸಿಜಿಆರ್ಎಫ್ ರವರ ಆದೇಶ ದಿನಾಂಕ:25–09–2018 ಅನ್ನು ರದ್ದುಗೊಳಿಸಿ ಆದೇಶಿಸಲು

ಹಾಗೂ ಮೇಲ್ಮನವಿಯ ಖರ್ಚಿನ ಬಾಬ್ತು ರೂ.5,000/–ವನ್ನು ಪಾವತಿಸಲು ಆದೇಶ ಕೋರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಮನವಿ ಕುರಿತು ಪ್ರತಿವಾದಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಬಂಟ್ವಾಳ, ಇವರು ಈ ಕೆಳಕಂಡಂತೆ ಲಿಖಿತ ಹೇಳಿಕೆ ನೀಡಿರುತ್ತಾರೆ.

"ಶ್ರೀ ವಿ.ಅಬ್ದುಲ್ ರಹಿಮಾನ್, ತಲಪಾಡಿ ಮನೆ ಬಿ.ಸಿ.ರೋಡ್, ಇವರು ತಮ್ಮ ಮಾಲೀಕತ್ವದ ಕೆನರಾ ವುಡ್ ಇಂಡಸ್ಟ್ರೀಸ್ ಸ್ಥಾವರಕ್ಕೆ ಸ್ಥಾವರ ಸಂಖ್ಯೆ:ಬಿ.ಎಮ್.ಪಿ–63 ರ ಮುಖೇನ ದಿನಾಂಕ:24–07–1981 ರಂದು 85 ಹೆಚ್.ಪಿ ಮಂಜೂರಾತಿ ಹೊರೆಯೊಂದಿಗೆ ವಿದ್ಯುತ್ ಸಂಪರ್ಕ ಪಡೆದಿದ್ದರು. ಸದ್ರಿ ಸಂದರ್ಭದಲ್ಲಿ ಸ್ಥಾವರಕ್ಕೆ ಸಿ.ಟಿ.ರೇಷಿಯೋ 100/5 ಇರುವ ಸಿ.ಟಿ ಯನ್ನು ಅಳವಡಿಸಲಾಗಿತ್ತು. ಸದ್ರಿ ಸ್ಥಾವರದ ಮಾಪಕ ಗುಣಾಂಕವು 20 ಆಗಿರುತ್ತದೆ. (ಸಿ.ಟಿ ರೇಷಿಯೋ 100/5 ಆದ ಕಾರಣ 100/5=20) ಗ್ರಾಹಕರು ದಿನಾಂಕ:21.4.2001 ರಂದು ತಮ್ಮ ಮಂಜೂರಾತಿ ಹೊರೆಯನ್ನು 85 ಹೆಚ್.ಪಿ ಯಿಂದ 65 ಹೆಚ್.ಪಿ ಗೆ Load Reduction ಮಾಡಿದ್ದರು. ಸದ್ರಿ ಸ್ಥಾವರದ ವಿದ್ಯುತ್ ಸಂಪರ್ಕ ದಿನಾಂಕವಾದ 24–07–1981 ರಿಂದ ಸಿ.ಟಿ. ಯಲ್ಲಿ ಯಾವುದೇ ಮಾರ್ಪಾಡು ಆಗದ ಕಾರಣ ಮಾಪಕ ಗುಣಾಂಕ "20" ರಂತೆಯೇ ಸೆಪ್ಟೆಂಬರ್ 2013 ರ ವರೆಗೂ ವಿದ್ಯುತ್ ಬಿಲ್‌ಗಳನ್ನು ಪಾವತಿಸುತ್ತಿದ್ದರು. 2013 ನೇ ಇಸವಿಯಲ್ಲಿ ಪಟ್ಟಣ ವ್ಯಾಪ್ತಿಯ ಗ್ರಾಹಕರನ್ನು RAPDRP ವ್ಯಾಪ್ತಿಗೆ ವರ್ಗಾಯಿಸಿದಾಗ, ಬಿಲ್ ತಂತ್ರಾಂಶವು ಮೆ॥ಝ್ಯೂಗಾಕ್ಸ್ ನಿಂದ ಮೆ॥ ಇನ್ಫೋಸಿಸ್‌ಗೆ ಬದಲಾವಣೆಗೊಂಡಿತ್ತು. ಹಾಗೂ 2013 ಸೆಪ್ಟೆಂಬರ್ ಮಾಪಕ ಗುಣಾಂಕವು "20" ರ ಬದಲಾಗಿ "15" ಎಂಬುದಾಗಿ ತಪ್ಪಾಗಿ ದಾಖಲಾಗಿತ್ತು. ಜನವರಿ 2018 ರಲ್ಲಿ ಮೆಸ್ಕಾಂ ಎಲ್.ಟಿ.ರೇಟಿಂಗ್ ತಂಡದವರು ತಮ್ಮ ನಿಯತಕಾಲಿಕ ಸ್ಥಾವರದ ಪರಿವೀಕ್ಷಣಾ ಸಂದರ್ಭದಲ್ಲಿ ಸದ್ರಿ ತಪ್ಪನ್ನು ಗಮನಿಸಿ,

ಈ ಬಗ್ಗೆ ಹಿಂಬಿಲ್ಲು ಜಾರಿಗೊಳಿಸುವಂತೆ ಸೂಚಿಸಿದ್ದರು. ಆ ಪ್ರಕಾರವಾಗಿ ಸೆಪ್ಟಂಬರ್ 13 ರಿಂದ ಡಿಸೆಂಬರ್ 17 ರ ವರೆಗಿನ ಮಾಪಕದ ಬಳಕೆಯನ್ನು ಲೆಕ್ಕಾಚಾರ ಮಾಡಿ, ಈ ಬಗ್ಗೆ ಬಿಟ್ಟು ಹೋಗಿರುವ 11080 ಯೂನಿಟ್‌ಗಳಿಗೆ ರೂ.67,996.00 ಕ್ಕೆ ಹಿಂಬಿಲ್ಲು ತಯಾರಿಸಿ, ಪಾವತಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಗ್ರಾಹಕರು ತಕರಾರು ತೆಗೆದಿರುವುದರಿಂದ ದಿನಾಂಕ:18.06.2018 ರಂದು ಈ ಕಛೇರಿಯಿಂದ Speaking Order ನೀಡಲಾಗಿತ್ತು. ಸದ್ರಿ ಆದೇಶದ ವಿರುದ್ಧ ಗ್ರಾಹಕರು ಸಿಜಿಆರ್‌ಎಫ್ ಮಂಗಳೂರಿನಲ್ಲಿ ದೂರು ದಾಖಲಿಸಿದ್ದು, ಈ ಬಗ್ಗೆ ದಿನಾಂಕ:23.08.2018 ರಂದು ಸಿಜಿಆರ್‌ಎಫ್ ನೀಡಿದ ಆದೇಶದಲ್ಲಿ ಈ ಕಛೇರಿಯಿಂದ ನೀಡಿದ Speaking Order ಸಮಂಜಸವಾಗಿರುವುದಾಗಿ ಅಭಿಪ್ರಾಯಿಸಿ, ಗ್ರಾಹಕರ ದೂರನ್ನು ವಜಾಗೊಳಿಸಿದ್ದರು. ಸಿಜಿಆರ್‌ಎಫ್. ನ ಆದೇಶದ ವಿರುದ್ಧ ಗ್ರಾಹಕರು ವಿದ್ಯುತ್ ಲೋಕಪಾಲರ ಕಛೇರಿಗೆ ಮೇಲ್ಮನವಿ ನೀಡಿರುತ್ತಾರೆ".

ದಕ್ಷಿಣ ಕನ್ನಡ ಜಿಲ್ಲೆ, ಮೆಸ್ಕಾಂ, ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ (ಸಿಜಿಆರ್‌ಎಫ್) ಇವರು ದಿನಾಂಕ:25–09–2018ರ ತಮ್ಮ ಆದೇಶದಲ್ಲಿ ಸೆಪ್ಟಂಬರ್ 2013 ರಿಂದ ಡಿಸೆಂಬರ್ 2017ರ ವರೆಗೆ ಸ್ಥಾವರದಲ್ಲಿನ ವಿದ್ಯುತ್ ಬಳಕೆಯ ಯೂನಿಟ್‌ಗಳ ಲೆಕ್ಕಚಾರ ಮಾಡುವಲ್ಲಿ ಗುಣಾಂಕವು (Meter Constant) 20ರ ಬದಲಾಗಿ 15 ಎಂದು ಪರಿಗಣಿಸಿ ಬಿಲ್ಲನ್ನು ನೀಡಲಾಗಿರುತ್ತದೆ. ಆದುದರಿಂದ KERC ನಿಯಮಾವಳಿ 29.03 ರಂತೆ ಪೂರಕ ಬಿಲ್ಲನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರು ಬಿಟ್ಟುಹೋದ ಗುಣಾಂಕ 5ಕ್ಕೆ ವಿದ್ಯುತ್ ಬಳಕೆಯ ಯೂನಿಟ್‌ನ್ನು ಲೆಕ್ಕಿಸಿ ತಯಾರಿಸಲಾದ ಪೂರಕ ಬಿಲ್ಲಿನ ಮೊತ್ತ ರೂ.67,996/–ನ್ನು ಪಾವತಿಸಲು ಮೇಲ್ಮನವಿದಾರರಿಗೆ ಸೂಚಿಸಿದ್ದು, ಸಮಂಜಸವಾಗಿದೆ ಎಂದು ಅಭಿಪ್ರಾಯಪಟ್ಟು ಮೇಲ್ಮನವಿದಾರರ ದೂರನ್ನು ವಜಾಗೊಳಿಸಿರುತ್ತಾರೆ.

Conditions of Supply of Electricity of Distributation Licensees in The State of Karnataka ರ ಕಂಡಿಕೆ 26.02 ಈ ಕೆಳಕಂಡಂತೆ ಇರುತ್ತದೆ.

**26.02 Periodicity of testing of meters by the Licensee,**

Periodicity of testing of meters shall be as follows:-

| Sl.No | Nature of installation | Periodicity of testing |
|---|---|---|
| i | HT installation | Every six months |
| ii | LT Power installation | |
| | a) More than 40HP | Once in a year |
| | b) 40 HP and below | Once in 2 year |
| iii | Other installation | Once in 5 year |

**Note:** All installations whose average consumption is less than 20 units per KW per month or more than 300 units per month shall be mandatorily tested every year.

ಮೇಲಿನ ನಿಯಮಾವಳಿ ಪ್ರಕಾರ 40 HP ಗಿಂತ ಹೆಚ್ಚು ಬಳಕೆ ಇರುವ ಎಲ್ಲಾ LT ಸ್ಥಾವರಗಳನ್ನು ಪ್ರತಿ ವರ್ಷಕ್ಕೆ ಒಮ್ಮೆ ತಪಾಸಣೆ ಮಾಡಬೇಕೆಂದು ಇರುತ್ತದೆ. ಮೇಲ್ಮನವಿದಾರರ 65 HP ಇರುವ LT–5 ಸ್ಥಾವರವನ್ನು ಕೂಡ ವರ್ಷಕ್ಕೆ ಒಮ್ಮೆ ತಪಾಸಣೆ ಮಾಡಬೇಕಾಗಿದ್ದು, ಮಾಡಲಾಗಿರುತ್ತದೆ ಎಂದು ಪರಿಭಾವಿಸಲಾಗಿದೆ. ಪ್ರತಿವಾದಿ–1 LT ರೇಟಿಂಗ್ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ರವರು ದಿನಾಂಕ:21–01–2018 ರಂದು ಮೇಲ್ಮನವಿದಾರರ ಸ್ಥಾವರವನ್ನು ತಪಾಸಣೆ ನಡೆಸಿ ದೋಷವನ್ನು ಕಂಡು ಹಿಡಿದು ಅದರಲ್ಲಿ ಬಿಟ್ಟು ಹೋಗಿರುವ 5 ಕನ್‌ಸ್ಟಂಟ್‌ನ್ನು ವಿಧಿಸಿ ಬಿಲ್ಲನ್ನು ಪರಿಷ್ಕೃತಗೊಳಿಸಲು ವರದಿಯನ್ನು ಪ್ರತಿವಾದಿ–1 ಉಪ ವಿಭಾಗಕ್ಕೆ ನೀಡಿರುತ್ತಾರೆ. ಆದ್ದರಿಂದ ಬಿಟ್ಟು ಹೋಗಿರುವ 5 ಕನ್‌ಸ್ಟಂಟ್‌ನ್ನು ದಿನಾಂಕ:01–10–2013 ರಿಂದ ಜನವರಿ 2018 ರ ವರೆಗೆ ಮೇಲ್ಮನವಿದಾರರ ಬಿಲ್ಲನ್ನು ಪರಿಷ್ಕೃತಗೊಳಿಸಿ ಹೆಚ್ಚುವರಿಯಾಗಿ ವಿಧಿಸಿರುವ ಬಿಲ್ಲು ರೂ.67,996/– ನ್ನು ಪಾವತಿಸಲು ಪ್ರತಿವಾದಿ–1 ಸೂಚಿಸಿರುತ್ತಾರೆ. ಮೇಲ್ಕಾಣಿಸಿದ Conditions of Supply ನ ಕಂಡಿಕೆ 26.02

ಪ್ರಕಾರ ವರ್ಷಕ್ಕೆ ಒಮ್ಮೆ ಮೇಲ್ಮನವಿದಾರರ ಸ್ಥಾವರವನ್ನು ತಪಾಸಣೆಗೊಳಿಸಿದ್ದಲ್ಲಿ ಸದರಿ ದೋಷವನ್ನು ತಪಾಸಣೆ ನಡೆಸಿದ ದಿನದಂದೆ ಪತ್ತೆ ಹಚ್ಚಿ ಸರಿಪಡಿಸುವ ಕ್ರಮ ಕೈಗೊಳ್ಳಬಹುದಾಗಿತ್ತು. ಇದನ್ನು ಮಾಡದೇ ಜನವರಿ 2018 ರಲ್ಲಿ ತಪ್ಪನ್ನು ಕಂಡು ಹಿಡಿದು ಒಂದೇ ಬಾರಿ ದಿನಾಂಕ: 01–10–2013 ರಿಂದ ಜನವರಿ 2018ರ ವರೆಗೆ ಹೆಚ್ಚುವರಿಯಾಗಿ ರೂ.67,996/– ಬಿಲ್ಲನ್ನು ನೀಡಿರುವುದು ಸಮರ್ಥನೀಯವಲ್ಲ. ದಿನಾಂಕ:01–10–2013 ರಿಂದ 1 ವರ್ಷದವರೆಗಿನ ಅವಧಿಗೆ ಮಾತ್ರ ಬಿಟ್ಟು ಹೋಗಿರುವ 5 ಕನ್‌ಸ್ಟಂಟ್‌ನ್ನು ಪರಿಗಣಿಸಿ ಮೇಲ್ಮನವಿದಾರರಿಗೆ ಪರಿಷ್ಕೃತ ಬಿಲ್ಲು ಜಾರಿಗೊಳಿಸಿ ವಸೂಲಿ ಮಾಡುವುದು. 1 ವರ್ಷದ ನಂತರದ ಅವಧಿಗೆ ಮೀಟರ್ ತಪಾಸಣೆ ಕಾಲಕ್ಕೆ ದೋಷವನ್ನು ಕಂಡು ಹಿಡಿದು ವರದಿ ಮಾಡದೇ ಇದ್ದಂತಹ, ಕರ್ತವ್ಯ ನಿರ್ವಹಣೆಯಲ್ಲಿ ಬೇಜವಾಬ್ದಾರಿ ತೋರಿದಂತಹ ಸಂಬಂಧಪಟ್ಟ ಸಿಬ್ಬಂದಿಯಿಂದ ವಸೂಲಿ ಮಾಡುವುದು.

ಮೇಲ್ಕಾಣಿಸಿದ ಕಂಡಿಕೆಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಸಂಖ್ಯೆ:ಒಎಂಬಿ/ಎಂ/ಜಿ–301/2018/ಡಿ–1188** **ದಿನಾಂಕ:30–01–2019**

## ಆದೇಶ

ದಿನಾಂಕ:01–10–2013 ರಿಂದ 1 ವರ್ಷದ ಅವಧಿಗೆ ಬಿಟ್ಟು ಹೋಗಿರುವ 5 ಕನ್‌ಸ್ಟಂಟ್‌ನ್ನು ವಿಧಿಸಿ ಪರಿಷ್ಕೃತ ಬಿಲ್ಲನ್ನು ಮೇಲ್ಮನವಿದಾರರಿಗೆ ನೀಡಿ ಆ ಪ್ರಕಾರ ಹಣ ಪಾವತಿಸಿಕೊಳ್ಳತಕ್ಕದ್ದು.

1 ವರ್ಷದ ನಂತರದ ಅವಧಿಗೆ ಮೀಟರ್ ತಪಾಸಣೆ ಕಾಲಕ್ಕೆ ದೋಷವನ್ನು ಕಂಡು ಹಿಡಿದು ವರದಿ ಮಾಡದೇ ಇದ್ದಂತಹ, ಕರ್ತವ್ಯ ನಿರ್ವಹಣೆಯಲ್ಲಿ ಬೇಜವಾಬ್ದಾರಿ ತೋರಿದಂತಹ ಸಂಬಂಧಪಟ್ಟ ಸಿಬ್ಬಂದಿಯಿಂದ ಹಣ ಪಾವತಿಸಿಕೊಳ್ಳತಕ್ಕದ್ದು.

ಸಹಿ/–
(ಎಸ್.ಎಸ್.ಪಟ್ಟಣಶೆಟ್ಟಿ)
ವಿದ್ಯುಚ್ಛಕ್ತಿ ಲೋಕಪಾಲರು

1. ವಿ.ಅಬ್ದುಲ್ ರಹಿಮಾನ್ ಬಿನ್, ದಿವಂಗತ ಅಬ್ದುಲ್ ಖಾದರ್,
ತಲಪಾಡಿ ಮನೆ, ಜೋಡುಮಾರ್ಗ ಗ್ರಾಮ, ಬಂಟ್ವಾಳ ತಾಲ್ಲೂಕು,
ಮಂಗಳೂರು–574 004.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ–1,
ಮ.ವಿ.ಸ.ಕಂ., ಬಂಟ್ವಾಳ.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಪೋರೇಟ್ ಕಛೇರಿ, ಮೆಸ್ಕಾಂ ಭವನ,
ಕಾವೂರು ಕ್ರಾಸ್ ರೋಡ್,
ಬಿಜೈ, ಮಂಗಳೂರು–574 004.
4. ಅಧ್ಯಕ್ಷರು, ಸಿಜಿಆರ್‌ಎಫ್, ದಕ್ಷಿಣ ಕನ್ನಡ ಜಿಲ್ಲೆ,
ಅಧೀಕ್ಷಕ ಅಭಿಯಂತರರು (ವಿ)ಕಛೇರಿ,
ನಿರ್ವಹಣೆ ಮತ್ತು ಪಾಲನೆ ವೃತ್ತ, ಮೆಸ್ಕಾಂ,
ಅಂಚೆ ಪೆಟ್ಟಿಗೆ ಸಂಖ್ಯೆ:240.
ಅತ್ತಾವರ, ಮಂಗಳೂರು ವಲಯ.
5. ಮಾನ್ಯ ಅಧ್ಯಕ್ಷರುರವರರು ಆಪ್ತ ಕಾರ್ಯದರ್ಶಿ, ಕವಿನಿಆ.
6. ಮಾನ್ಯ ಸದಸ್ಯರು (ಎ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
7. ಮಾನ್ಯ ಸದಸ್ಯರು (ಎಂ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
8. ಮಾನ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕವಿನಿಆ.